



ಎನ್.ಟಿ. ಚೀಲ ಮತ್ತು ಅದನ್ನು ಉಪಯೋಗಿಸುವ ವಿಧಾನ



ಗೂಡು ಕಟ್ಟಿಸುವ ಜಾಗದಲ್ಲಿ ಎನ್.ಟಿ. ಚೀಲವನ್ನು ಇಟ್ಟಿರುವುದು



ಎನ್.ಟಿ. ಚೀಲವನ್ನು ಗೊಬ್ಬರದ ಗುಂಡಿಯಲ್ಲಿ ಇಟ್ಟಿರುವುದು

## ವ್ಯವಸಾಯಿಕ ಕ್ರಮ

- ರೇಷ್ಮೆಹುಳು ಸಾಕಾಣಿಕೆಯ ನಂತರ ಹಿಪ್ಪುನೇರಳೆ ರೆಂಬೆಗಳನ್ನು ಹಿಕ್ಕೆ ಮತ್ತು ತಿಂದುಳಿದ ಎಲೆಗಳಿಂದ ಬೇರ್ಪಡಿಸಿ.
- ಹಿಕ್ಕೆ ಮತ್ತು ತಿಂದುಳಿದ ಎಲೆಗಳನ್ನು ಎಲ್ಲೆಂದರಲ್ಲಿ ಹೊರಗಡೆ ಸುರಿಯಬಾರದು ಏಕೆಂದರೆ ಅದರಲ್ಲಿ ನೂರಾರು ಊಜಿ ಕೋಶಗಳು ಇರುವ ಸಂಭವವಿರುತ್ತದೆ. ಅದನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಭದ್ರವಾಗಿ ಕಟ್ಟಿ ಸುಮಾರು 15–20 ದಿನಗಳ ಕಾಲ ಒಂದೆಡೆ ಇಟ್ಟು ನಂತರ ಕಾಂಪೋಸ್ಟ್ ಗುಂಡಿಗೆ ಹಾಕಿರಿ. ಬದಲಾಗಿ ಹಿಕ್ಕೆ ಮತ್ತು ತಿಂದುಳಿದ ಎಲೆಗಳನ್ನು 3–4 ಅಡಿ ಆಳವಾದ ಗುಂಡಿಯಲ್ಲಿ ಹೂತು ಹಾಕಬಹುದು ಅಥವಾ ಸುಡಲೂಬಹುದು.



ಹಿಪ್ಪುನೇರಳೆ ರೆಂಬೆ ಬೇರ್ಪಡಿಸಿರುವುದು



ತ್ಯಾಜ್ಯ ವಸ್ತುವಿನಲ್ಲಿರುವ ಊಜಿ ಕೋಶಗಳು



ತ್ಯಾಜ್ಯ ವಸ್ತುವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಕಟ್ಟಿರುವುದು



ತ್ಯಾಜ್ಯ ವಸ್ತುವನ್ನು ಸುಡುತ್ತಿರುವುದು

ನಿಸೋಲಿಂಕ್ಸ್ ಥೈಮಸ್ ಚೀಲಗಳನ್ನು ಪಡೆಯಲು ರೇಷ್ಮೆ ಹುಳು ಚಾಕಿಯಾದ ದಿನಾಂಕ ತಿಳಿಸಿ ಮುಂಗಡ ಪಾವತಿಸಿ ಹೆಸರು ನೊಂದಾಯಿಸಿಕೊಳ್ಳಬೇಕು.

ಪಠ್ಯ:
ಜೆ.ಬಿ. ನರೇಂದ್ರ ಕುಮಾರ್ ಮತ್ತು ವಿನೋದ್ ಕುಮಾರ್

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ

**ನಿರ್ದೇಶಕರು**
ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರ, ಶ್ರೀರಾಂಪುರ
ಮೈಸೂರು 570 008
ದೂರವಾಣಿ: 0821–2362757, 2362406
ಫ್ಯಾಕ್ಸ್: 0821–2362845
ವೆಬ್: www.csrtimys.res.in
ಇ–ಮೇಲ್: csrtimys.csb@nic.in

Copies: 1000 February 2019 Design & Layout: J. Justin Kumar

# ಊಜಿ ನೊಣದ ನಿರ್ವಹಣೆಗೆ ಸಮಗ್ರ ಹತೋಟಿ ಕ್ರಮಗಳು



ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ
(ISO 9001: 2015 ಪ್ರಮಾಣೀಕೃತ)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ, ಮೈಸೂರು – 570008

# ಊಜಿ ನೊಣ

ಎಕ್ಸೋರಿಸ್ಟಾ ಬಾಂಬೈಸಿಸ್



ಊಜಿ ನೊಣ ರೇಷ್ಮೆ ಹುಳುವಿನ ಒಂದು ಪರಾವಲಂಬಿ ಕೀಟ. ಪ್ರಸ್ತುತ ಇದು ರೇಷ್ಮೆ ಉತ್ಪಾದನೆಯಲ್ಲಿ ಮಂಚೂಣಿಯಲ್ಲಿರುವ ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ರೇಷ್ಮೆ ಗೂಡಿನ ಇಳುವರಿಯಲ್ಲಿ ಶೇಕಡಾ 5–15 ರಷ್ಟು ನಷ್ಟವನ್ನು ಉಂಟುಮಾಡುತ್ತಿದೆ.

**ಕಂಡು ಬರುವ ಕಾಲ:** ವರ್ಷವಿಡೀ ಕಂಡುಬಂದರೂ, ಮಳೆಗಾಲದಲ್ಲಿ (ಜುಲೈನಿಂದ ನವೆಂಬರ್) ಅಧಿಕ.

**ಹಾವಳಿಯ ಲಕ್ಷಣಗಳು:** ರೇಷ್ಮೆ ಹುಳುಗಳ ಮೈ ಮೇಲೆ ಕಪ್ಪನೆಯ ಮಚ್ಚೆ ಹಾಗೂ ಕೋಶಗಳ ತುದಿಯಲ್ಲಿ ಗುಂಡಗಿರುವ ರಂಧ್ರಗಳು ಊಜಿ ಬಾಧೆಯ ಲಕ್ಷಣಗಳು.





## ಊಜಿ ನೊಣದ ಜೀವನ ಚಕ್ರ

| | |
|---|---|
| ಮೊಟ್ಟೆಗಳು | : 400 – 500 |
| ಮೊಟ್ಟೆ ಅವಧಿ | : 2-3 ದಿನಗಳು |
| ಮರಿ ಹುಳು ಅವಧಿ | : 6-8 ದಿನಗಳು |
| ಕೋಶಾವಧಿ | : 10 – 12 ದಿನಗಳು |
| ನೊಣದ ಜೀವಿತದ ಅವಧಿ | : 12-20 ದಿನಗಳು |
| ಜೀವನ ಚಕ್ರದ ಅವಧಿ | : 18-22 ದಿನಗಳು |

# ನಿರ್ವಹಣಾ ಕ್ರಮಗಳು

## ಭೌತಿಕ ಕ್ರಮ

- ನೈಲಾನ್ ಪರದೆ/ತಂತಿಯ ಜಾಲರಿಯನ್ನು ಬಾಗಿಲು, ಕಿಟಕಿ, ಸ್ಟ್ಯಾಂಡ್‌ಗಳಿಗೆ ಅಳವಡಿಸುವುದರಿಂದ ಊಜಿನೊಣವು ಹುಳು ಸಾಕಾಣಿಕೆ ಮನೆ ಪ್ರವೇಶಿಸುವುದನ್ನು ತಡೆಯಬಹುದು.
- ಸ್ವಯಂನಿಯಂತ್ರಿತ ಬಾಗಿಲನ್ನು ಅಳವಡಿಸುವುದು.
- ಹುಳು ಸಾಕಣೆ ಮನೆಯ ಮುಂಭಾಗದಲ್ಲಿ ಉಪಕೋಣೆ ನಿರ್ಮಿಸಿ, ಊಜಿನೊಣ ಬಾರದಂತೆ ತಡೆಗಟ್ಟಿ.





## ಊಜಿ ಟ್ರ್ಯಾಪ್ ಬಳಕೆ

ಊಜಿ ಟ್ರ್ಯಾಪ್ ದ್ರಾವಣದ ಹಳದಿ ಬಣ್ಣವು ಪ್ರೌಢ ಊಜಿ ನೊಣಗಳನ್ನು ಆಕರ್ಷಿಸಿ ಕೊಲ್ಲುತ್ತದೆ.

ಒಂದು ಮಾತ್ರೆಯನ್ನು 1 ಲೀಟರ್ ನೀರಿನಲ್ಲಿ ಬೆರೆಸಿ, ಬಿಳಿ ಬಣ್ಣದ ಪ್ಲಾಸ್ಟಿಕ್ ತಟ್ಟೆಗಳಲ್ಲಿ ಹಾಕಿ ಹುಳು ಸಾಕಾಣಿಕೆ ಮನೆಯ ಹೊರಗೆ, ಒಳಗೆ, ಕಿಟಕಿ ಹಾಗೂ ಬಾಗಿಲ ಬಳಿ ಬೆಳಕು ಬೀಳುವ ಸ್ಥಳದಲ್ಲಿ ಎತ್ತರದಲ್ಲಿ ಇಡಬೇಕು.

ರೇಷ್ಮೆ ಹುಳುಗಳು ಗೂಡು ಕಟ್ಟಲು ಪ್ರಾರಂಭಿಸಿದ 15 ದಿನಗಳ ತನಕ ಊಜಿ ಟ್ರ್ಯಾಪ್ ಗಳನ್ನು ಹುಳು ಸಾಕಣೆ ಮನೆಯೊಳಗೆ ಮತ್ತು ಗೂಡು ಕಟ್ಟಿಸುವ ಹಜಾರದೊಳಗೆ ಇಡುವುದರಿಂದ ಅಲ್ಲಿ ಊಜಿ ಕೋಶಗಳಿಂದ ಹೊರಬರುವ ಊಜಿ ನೊಣಗಳನ್ನು ಆಕರ್ಷಿಸಿ ನಾಶಪಡಿಸಬಹುದು.



## ಜೈವಿಕ ಕ್ರಮ





- ನಿಸೋಲಿಂಕ್ಸ್ ಥೈಮಸ್ (ಎನ್.ಟಿ) ಊಜಿ ನೊಣದ ಕೋಶಗಳ ಮೇಲೆ ತನ್ನ ಮೊಟ್ಟೆಗಳನ್ನು ಇಟ್ಟು ಊಜಿ ನೊಣದ ಕೋಶಗಳನ್ನು ನಾಶಪಡಿಸುತ್ತದೆ. ಒಂದು ಊಜಿ ನೊಣದ ಕೋಶದ ಒಳಗೆ ಸುಮಾರು 40–60 ಎನ್.ಟಿ ಮರಿಗಳು ಅಭಿವೃದ್ಧಿ ಹೊಂದುತ್ತವೆ.
- ಈ ಪರತಂತ್ರ ಕೀಟದ ಮೊಟ್ಟೆಗಳನ್ನು ಮನೆ ನೊಣದ ಕೋಶಗಳ ಮೇಲೆ ಇಡಿಸಿ ಒಂದು ನೈಲಾನ್ ಚೀಲಕ್ಕೆ 50 ಎಂ.ಎಲ್ ನಂತೆ ತುಂಬಿಸಿ ರೈತರಿಗೆ ಸರಬರಾಜು ಮಾಡಲಾಗುವುದು.
- ಒಂದು ಎನ್.ಟಿ ಚೀಲದಿಂದ ಸುಮಾರು ಹತ್ತು ಸಾವಿರ ಪರತಂತ್ರ ಜೀವಿಗಳು ಹೊರಬರುತ್ತವೆ. ಒಂದು ಎನ್.ಟಿ ಚೀಲದ ಬೆಲೆ ರೂ.50 ಮತ್ತು 100 ಮೊಟ್ಟೆ ಸಾಕಾಣಿಕೆಗೆ 2 ಎನ್.ಟಿ ಚೀಲಗಳನ್ನು ಶಿಫಾರಸ್ಸು ಮಾಡಲಾಗಿದೆ.
- ರೇಷ್ಮೆ ಹುಳುಗಳು ನಾಲ್ಕನೇ ಜ್ವರದಿಂದ ಹೊರ ಬಂದ ಮೂರು ದಿನಗಳ ನಂತರ ಎನ್.ಟಿ ಚೀಲಗಳನ್ನು ಹುಳು ಸಾಕಾಣಿಕೆ ಮನೆಯ ಒಳಗಡೆ ಇಡಬೇಕು.
- ರೇಷ್ಮೆ ಹುಳುಗಳು ಹಣ್ಣಾದ ನಂತರ ಅದೇ ಚೀಲಗಳನ್ನು ಗೂಡು ಕಟ್ಟಿಸುವ ಕೋಣೆಗೆ ರವಾನಿಸಿ.
- ರೇಷ್ಮೆ ಗೂಡನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದ ನಂತರ ಅದೇ ಚೀಲಗಳನ್ನು ತಿಪ್ಪೆ ಗುಂಡಿಗೆ ಹಾಕಿರಿ. ಅಲ್ಲಿಯೂ ಸಹ ಇತರೆ ಜಾತಿಯ ನೊಣದ ಕೋಶಗಳು ಇರುವುದರಿಂದ ಎನ್.ಟಿ. ಪರತಂತ್ರ ಜೀವಿಗಳು ವೃದ್ಧಿಯಾಗಲು ಸಹಕಾರಿಯಾಗುತ್ತದೆ.